ಇವಳ ಅಪ್ಪನನ್ನು ದೆಹಲಿ ಸಿಸಿಬಿ ಪೊಲೀಸರು ಮತ್ತು ಸಿಬಿಐನವರು ಅರೆಸ್ಟ್ ಮಾಡಿ ತನಿಖೆ ನಡೆಸುತ್ತಿದ್ದಾರೆ. ಇವಳ ಅಪ್ಪ ಎಂದರೆ, ಹುಟ್ಟಿಗೆ ಕಾರಣನಾದ ಅಪ್ಪನಲ್ಲ. ಇವಳ ಅಮ್ಮನ ಎರಡನೆಯ ಗಂಡ. ಇವಳ ಅಮ್ಮ ಅಪೂರ್ವ ಅಂತ. ಅಪೂರ್ವ ಸುಂದರಿಯೇ ಆಗಿದ್ದಳು. ಗಗನಸಖಿ ಕೆಲಸ. ಗಗನಸಖಿಯಾಗಿ ಕೆಲಸಕ್ಕೆ ಸೇರುವ ಮೊದಲೇ ಯಾರನ್ನೋ ಪ್ರೀತಿಸಿ ಲಿವಿಂಗ್ ಟುಗೆದರ್‌ನಲ್ಲಿದ್ದಾಗ ಇವಳು ಹುಟ್ಟಿದಳಂತೆ. ಪ್ರಿಯತಮನೊಂದಿಗೆ ತೀವ್ರ ಭಿನ್ನಾಭಿಪ್ರಾಯ ಉಂಟಾದಾಗ ಇವಳನ್ನು ಅಮ್ಮನ ಮನೆಯಲ್ಲಿ ಬಿಟ್ಟು ಗಗನಸಖಿ ಕೆಲಸಕ್ಕೆ ಸೇರಿದಳಂತೆ. ಹದಿನೈದು ವರ್ಷಗಳ ಕಾಲ ಗಗನಸಖಿ ಕೆಲಸ ಮಾಡಿ ಯಾವ ಬಂಧನಕ್ಕೂ ಒಳಗಾಗದ ಅಪೂರ್ವ ತನ್ನ ನಲತ್ತೆರಡನೆಯ ವಯಸ್ಸಿನಲ್ಲಿ ದೆಹಲಿಯ ಖ್ಯಾತ ಉದ್ಯಮಿ ಹರಿಕಿಶನ್ ಶರ್ಮಾರ ಮೋಹಕ್ಕೆ ಒಳಗಾದಳು. ಇಬ್ಬರೂ ಮದುವೆಯೂ ಆದರು. ಹರಿಕಿಶನ್ ಅಪೂರ್ವಳಿಗಿಂತಲೂ ಏಳು ವರ್ಷ ಚಿಕ್ಕವನು. ಮದುವೆಯಾದ ನಂತರ ಅಮ್ಮನ ಮನೆಯಲ್ಲಿ ಬಿಟ್ಟಿದ್ದ ಮಗಳನ್ನು ಅಪೂರ್ವ ತನ್ನ ಮನೆಗೆ ಕರೆತರುತ್ತಾಳೆ. ಹರಿಕಿಶನ್ ಶರ್ಮಾ ಪೂನಂಳನ್ನು ಸ್ವಂತ ಮಗಳಂತೆ ಪ್ರೀತಿಸತೊಡಗುತ್ತಾನೆ. ಆದರೆ ಈ ಮೂರು ತಿಂಗಳ ಹಿಂದೆ ಮೂವರು ಕೆನಡಾಕ್ಕೆ ಹೋದಾಗ ಅಪೂರ್ವ ನಯಾಗಾರ ಜಲಪಾತದಲ್ಲಿ ಬಿದ್ದು ಸಾಯುತ್ತಾಳೆ. ಆಕೆಯ ಹೆಣ ಕೂಡಾ ಸಿಗುವುದಿಲ್ಲ. ಆನಂತರ ಪೂನಂ ತೀವ್ರ ಖಿನ್ನತೆಗೆ ಒಳಗಾಗುತ್ತಾಳೆ. ವಾರದ ಹಿಂದೆ ಇವಳನ್ನು ನನ್ನ ಬಳಿಗೆ ಕರೆತಂದಾಗ ಇವಳು ಎರಡು ತಿಂಗಳ ಪ್ರೆಗ್ನೆಂಟ್ ಆಗಿರುವುದು ತಿಳಿಯಿತು. ಅಪೂರ್ವಳ ತಂದೆ–ತಾಯಿ ದೆಹಲಿಯ ಪೊಲೀಸ್ ಕಮಿಷನರನ್ನು ಭೇಟಿಯಾಗಿದ್ದಾರೆ. ಇವಳ ಪ್ರೆಗ್ನೆನ್ಸಿಗೆ ಹರಿಕಿಶನ್ ಶರ್ಮಾ ಕಾರಣವೆಂದು ದಟ್ಟವಾದ ಸಂಶಯ ಮತ್ತು ಅಪೂರ್ವಳನ್ನು ಹರಿಕಿಶನ್ ಶರ್ಮಾ ಮತ್ತು ಪೂನಂ ಇಬ್ಬರೂ ಸೇರಿ ಪ್ಲಾನ್ ಮಾಡಿ ನಯಾಗಾರ ಜಲಪಾತಕ್ಕೆ ತಳ್ಳಿರುವುದು ಸಿ.ಸಿ. ಕ್ಯಾಮೆರಾಗಳಲ್ಲಿ ಸೆರೆಯಾಗಿರುವುದು ಪೊಲೀಸರಿಗೆ ಅತಿ ದೊಡ್ಡ ಸಾಕ್ಷಿಯಾಗಿ ಸಿಕ್ಕಿಬಿಟ್ಟಿದೆ. ಅದಕ್ಕೆ ಹರಿಕಿಶನ್‌ರನ್ನು ಅರೆಸ್ಟ್ ಮಾಡಲಾಗಿದೆ. ಆದರೆ ಪೂನಂಳನ್ನು ಅವಳ ತೀವ್ರ ಅನಾರೋಗ್ಯ ಕಾರಣದಿಂದಾಗಿ ಅರೆಸ್ಟ್ ಮಾಡಲಾಗಿಲ್ಲ. ಪೂನಂಗೆ ಹದಿನೈದು ವರ್ಷ ವಯಸ್ಸಿನಿಂದಲೂ ಬಾರ್ಡರ್ ಲೈನ್ ಪರ್ಸನಾಲಿಟಿ ಡಿಸಾರ್ಡರ್ ಇರುವುದು ಅವಳ ಮೆಡಿಕಲ್ ಹಿಸ್ಟರಿಯಿಂದ ಕನ್ಫರ್ಮ್ ಆಗಿದೆ. ನಿನ್ನೆ ಸಿಬಿಐ ಅಧಿಕಾರಿಗಳು ಬಂದಿದ್ದರು. ಸಿಬಿಐನವರು ನಾವು ಬೇಕಾಗಿಯೇ ಪೂನಂಗೆ ರಕ್ಷಣೆ ಕೊಡುತ್ತಿದ್ದೇವೆಂದು ಆಪಾದನೆ ಮಾಡಿಹೋಗಿದ್ದಾರೆ. ಸಿಬಿಐ ಡೈರೆಕ್ಟರನ್ನು ನಮ್ಮ ಸಿಂಧೂ ಹ್ಯಾಂಡಲ್ ಮಾಡಿ ಕಳಿಸಿದ್ದಾಳೆ. ಅಂದಹಾಗೆ, ಸಿಬಿಐ ಡೈರೆಕ್ಟರ್ ವಿಕ್ರಮ್ ರೆಡ್ಡಿ ನಿಮ್ಮ ಅಣ್ಣನವರಂತೆ' ಎಂದು ಆಮ್ರಪಾಲಿ ಮಾತು ನಿಲ್ಲಿಸಿ, ಗ್ಲಾಸಿನಲ್ಲಿದ್ದ ವಿಸ್ಕಿಯನ್ನು ಖಾಲಿ ಮಾಡಿದ್ದರು. ನಾನು ತೀವ್ರ ಆಘಾತಕ್ಕೆ ಒಳಗಾಗಿಬಿಟ್ಟಿದ್ದೆ.

ಸಿಂಧೂ ಮೆನನ್ನಳೇ ಊಟ ಬಡಿಸಿದ್ದಳು. ಯಾಂತ್ರಿಕವಾಗಿ ಊಟ ಮಾಡಿದ್ದೆ. ಆಮ್ರಪಾಲಿ ಮತ್ತೆ ಮಾತು ಪ್ರಾರಂಭಿಸಿದರು: 'ಸಿಂಧೂ ಹೇಳಿದಳು, ನಿಮ್ಮ ಬ್ರದರ್ ಕ್ರಾನಿಕ್ ಸೋರಿಯಾಸಿಸ್ ಕಾಯಿಲೆಯಿಂದ ಬಳಲುತ್ತಿರುವರಂತೆ. ಅದು ಎಂಥ್ರೋಡಮಿಕ್ ಸೋರಿಯಾಸಿಸ್. ಅದೊಂದು ತುಂಬಾ ಸೀರಿಯಸ್ಸಾದ ಕಾಯಿಲೆ. ಅದರಿಂದಾಗಿ ಯಾವ ಕ್ಷಣದಲ್ಲಿ ಬೇಕಾದರೂ ತೀವ್ರ ಹೃದಯಾಘಾತ ಉಂಟಾಗಬಹುದು. ಮತ್ತು ಈ ಕಾಯಿಲೆಯಿಂದ ನರಳುವವರಿಗೆ ಮೆಂಟಲ್ ಸ್ಟೆಬಿಲಿಟಿ ಇರುವುದಿಲ್ಲ. ಸದಾ ಖಿನ್ನತೆಗೆ ಒಳಗಾಗುತ್ತಿರುತ್ತಾರೆ. ಇಂಥವರಿಗೆ ಎಷ್ಟೇ ಐಶ್ವರ್ಯವಿದ್ದರೂ, ಅಧಿಕಾರವಿದ್ದರೂ ಒಂದಿಷ್ಟೂ ಸಮಾಧಾನವಿರುವುದಿಲ್ಲ, ನೆಮ್ಮದಿಯಿರುವುದಿಲ್ಲ.'

ಆಮ್ರಪಾಲಿಯ ಮಾತುಗಳನ್ನು ತುಂಡರಿಸಿ ಸಿಂಧೂ ಮೆನನ್ ನನ್ನ ಕಡೆ ತಿರುಗಿ ಹೇಳಿದ್ದಳು: 'ಹೌದು, ಅವರ ಎಂಬತ್ತು ಪರ್ಸೆಂಟ್ ದೇಹದಲ್ಲಿ ಕೆಂಪು ಕಲೆಯ ಊತಗಳಿದ್ದವು. ಅಲ್ಲಲ್ಲಿ ರಕ್ತ ಕೂಡಾ ಸೋರುತ್ತಿತ್ತು. ದೇಹ ಒಂಥರಾ ಅಸಹ್ಯಕರವಾದ ವಾಸನೆಯಿಂದ ಕೂಡಿತ್ತು. ಅವರು ನನ್ನನ್ನು ಬಯಸಿದ್ದರು. ಅಂಥವರ ನೋವನ್ನು, ಹತಾಶೆಯನ್ನು ನಾನು ಬಹಳ ವರ್ಷಗಳಿಂದಲೂ ಅರ್ಥ ಮಾಡಿಕೊಂಡಿದ್ದೇನೆ. ನನ್ನ ಇಡೀ ನಗ್ನ ದೇಹವನ್ನು ನೋಡಿ ಅವರು ಬೆವರಿದ್ದರು. ಅವರ ಶರ್ಟ್ ಜೇಬಿನಿಂದ ನಾನು ಮತ್ತು ಮಾಧವನ್ ಪಿಳ್ಳೈರ ದೈಹಿಕ ಸಂಪರ್ಕ ಹೊಂದುತ್ತಿದ್ದ ಫೋಟೊ ಕೆಳಗೆ ಬಿದ್ದಿತ್ತು. ಅಷ್ಟೇ, ಅವರು ಬಟ್ಟೆ ತೊಟ್ಟುಕೊಂಡು ಹೊರಟುಹೋದರು. ನನಗೆ ಅವರನ್ನು ನೋಡಿ ಬಹಳವೇ ನೋವಾಯಿತು'. ಅವಳು ಮಾತು ಮುಗಿಸಿದಾಗ ನಿಜಕ್ಕೂ ಅವಳಿಗೆ ನೋವಾಗಿರುವುದು ಮುಖಭಾವದಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು.

ನನ್ನದು ಊಟ ಮುಗಿದಿತ್ತು. ಆಮ್ರಪಾಲಿ ಮತ್ತು ಸಿಂಧೂ ಮೆನನ್ನರ ಮಾತುಗಳು ನನ್ನ ದೇಹದಲ್ಲಿ ಸಣ್ಣಗೆ ನಡುಕವನ್ನುಂಟು ಮಾಡಿದ್ದವು. ನಾನು ಡಿಗ್ರಿಯಲ್ಲಿದ್ದಾಗ ಅಪ್ಪ ಹೇಳುತ್ತಿದ್ದ ಕರ್ಮ ಸಿದ್ಧಾಂತದ ಸಂಗತಿಗಳು ನೆನಪಿಗೆ ಬಂದಿದ್ದವು. 'ಈ ಜಗತ್ತಿನಲ್ಲಿ ಪ್ರತಿಯೊಬ್ಬ ಮನುಷ್ಯನೂ ತಾನು ಮಹಾನ್ ವ್ಯಕ್ತಿಯೆಂಬ ಭ್ರಮೆಯಲ್ಲಿರುತ್ತಾನೆ. ತಾನೇನೋ ಮಹಾನ್ ಸಾಧನೆ ಮಾಡಿದ್ದೇನೆಂಬ ಅಹಂ ತುಂಬಿಕೊಂಡಿರುತ್ತಾನೆ. ಆದರೆ ವಾಸ್ತವವಾಗಿ ಇಡೀ ಸೃಷ್ಟಿಯಲ್ಲಿ ಪ್ರತಿಯೊಂದೂ ಪೂರ್ವ ನಿರ್ಧರಿತವಾಗಿರುತ್ತದೆ. ಯಾರು ಒಳ್ಳೆಯದನ್ನು ಮಾಡುತ್ತಾರೋ ಅವರಿಗೆ ಒಳ್ಳೆಯದಾಗುತ್ತದೆ. ಯಾರು ಕೆಟ್ಟದ್ದನ್ನು ಮಾಡುತ್ತಾರೋ ಅವರಿಗೆ ಕೆಟ್ಟದ್ದಾಗುತ್ತದೆ. ಮತ್ತು ಇದು ಮುಂದಿನ ಜನ್ಮಗಳಿಗೂ ವಿಸ್ತಾರಗೊಳ್ಳುತ್ತದೆ ಎಂದು ಕರ್ಮಸಿದ್ಧಾಂತ ಹೇಳಿದರೂ ಮನುಷ್ಯನ ಯಾವ ಬುದ್ಧಿಮತ್ತೆಗೂ ಅದರ ಸಣ್ಣ ಚಹರೆ ಕೂಡಾ ದಕ್ಕಿಲ್ಲ. ಜಗತ್ತಿನಲ್ಲಿ ಕೆಲವರಿಗೆ ಕೆಟ್ಟದಾಗಿ ಕಂಡಿದ್ದು ಮತ್ತೆ ಕೆಲವರಿಗೆ ಒಳ್ಳೆಯದಾಗಿ ಕಾಣುತ್ತದೆ. ಹಾಗಾಗಿ ಜಗತ್ತಿನಲ್ಲಿ ಸಂಭವಿಸುವ ಯಾವ ಸಂಗತಿಗಳೂ ಮನುಷ್ಯನ ಅಧೀನದಲ್ಲಾಗಲೀ ನಿಯಂತ್ರಣದಲ್ಲಾಗಲೀ ಇರುವುದಿಲ್ಲ. ಯಾವ ಮನುಷ್ಯ ಎಂಥ ಸಂಗತಿಗಳಿಗಾಗಲೀ ಚಿಂತೆ ಮಾಡುವುದಿಲ್ಲವೋ, ದುಃಖ ಪಡುವುದಿಲ್ಲವೋ ಅಂಥವನಿಗೆ ಮೋಕ್ಷ ಲಭಿಸುತ್ತದೆ. ಆದರೆ ವಾಸ್ತವವಾಗಿ ಜಗತ್ತಿನಲ್ಲಿ ಅಂಥ ಒಂದೇ ಒಂದು ಜೀವಿಯನ್ನೂ ಕಾಣಲಿಕ್ಕೆ ಸಾಧ್ಯವಾಗುವುದಿಲ್ಲ' ಎಂದು ಅಪ್ಪ ಒಮ್ಮೆ ಹೇಳಿದ್ದು ನೆನಪಾಗಿತ್ತು. ಒಂದನೇ ನಂಬರ್ ಸ್ಯೂಟಿನಿಂದ ಭಾರವಾದ ಹೃದಯವನ್ನು ಹೊತ್ತು ನನ್ನ ರೂಮಿಗೆ ಹಿಂತಿರುಗಿದ್ದೆ.

ಹಾಸಿಗೆಯ ಮೇಲುರುಳಿದವನಿಗೆ ಪ್ರಯಾಣದ ಆಯಾಸದಿಂದಾಗಿಯೂ, ಡ್ರಿಂಕ್ಸ್ ಜೊತೆಗೆ ಒಳ್ಳೆಯ ಊಟ ಮಾಡಿದ್ದರಿಂದಾಗಿಯೂ ಬೇಗನೆ ನಿದ್ದೆ ಆವರಿಸಿತ್ತು. ರೂಮಿನ ಕಾಲಿಂಗ್ ಬೆಲ್ ಆಗುವುದರೊಂದಿಗೆ ಗಾಢ ನಿದ್ದೆಯಲ್ಲಿದ್ದವನಿಗೆ ಎಚ್ಚರವಾಗಿತ್ತು. ಎದ್ದು ಬಾಗಿಲು ತೆರೆದಿದ್ದೆ. ಸಮಯ ಬೆಳಗಿನ ಜಾವ ನಾಲ್ಕು ಗಂಟೆಯಾಗಿತ್ತು. ಮುಖದಲ್ಲಿ ತುಂಬಿಕೊಂಡ ಗಾಬರಿ, ಕಣ್ಣಲ್ಲಿ ನೀರು. 'ಅಪ್ಪ ಮೂರು ಗಂಟೆಗೆ ಹೋಗಿಬಿಟ್ರಂತೆ. ಐ ಕಾಂಟ್ ಬಿಲೀವ್. ಎಂಡೋಸಲ್ಫಾನ್ ಕುಡಿದು ಆತ್ಮಹತ್ಯೆ ಮಾಡಿಕೊಂಡರಂತೆ. ಬೆಳಿಗ್ಗೆ ಏಳು ಗಂಟೆ ಫ್ಲೈಟ್‌ಗೆ ಎರಡು ಟಿಕೆಟ್ ಬುಕ್ ಮಾಡಿಸಿದ್ದಾರೆ ಆಮ್ರಪಾಲಿ. ನೀವೂ ಸಹ ನನ್ನ ಸಂಗಡ ಬರುವವರಿದ್ದೀರಿ. ಚಿಕ್ಕಪ್ಪ ಕೆ.ಎಮ್. ನಯ್ಯಾರ್ ಭಗವಾನ್ ಕುಟ್ಟಿಗೆ ನಿಮಗೂ ಬರಲು ಹೇಳಿದ್ದಾರಂತೆ. ಫ್ಯುನರಲ್‌ಗೆ ಸಿಎಂ ಅಲ್ಲದೆ ಪಿಎಂ ಕೂಡಾ ಬರಲಿದ್ದಾರಂತೆ. ಸಾವಿನ ಮೇಲೆ ಸಾವು, ಮೈಗಾಡ್!' ಎಂದು ನನ್ನ ಬಳಿ ಬಂದು ಎದೆಗೆ ಒರಗಿದ್ದಳು. ನಾನು ಅವಳ ತಲೆ ಸವರಿ ಸಮಾಧಾನ ಮಾಡಿದ್ದೆ.

ಬೆಟ್ಟದಷ್ಟು ಮನೋಬಲ ಇಟ್ಟುಕೊಂಡಿದ್ದ ಸುಧೀಂದ್ರ ನಯ್ಯಾರ್ ಆತ್ಮಹತ್ಯೆ ಮಾಡಿಕೊಂಡಿರುವುದು ನನ್ನ ಮಟ್ಟಿಗೆ ನಂಬಲಾರದ ಸಂಗತಿಯಾಗಿತ್ತು. ಕರುತ್ತಮ್ಮ ತಂದ ಬಿಸಿ ಬಿಸಿ ಚಹಾ ಕುಡಿದು ವಿಮಾನ ನಿಲ್ದಾಣಕ್ಕೆ ಹೊರಡಲು ಸಿದ್ಧನಾಗುತ್ತಿದ್ದೆ. ಫೋನ್ ರಿಂಗಾಗಿತ್ತು. ರಿಸೀವ್ ಮಾಡಿದಾಗ ಆ ಕಡೆಯಿಂದ ರಾಘವರೆಡ್ಡಿಯ ಧ್ವನಿ. 'ಹಲೋ ಏನು ಸಮಾಚಾರ ಬೆಳಿಗ್ಗೆಯೇ?' ಕೇಳಿದ್ದೆ. 'ಅರೆ, ಬ್ರದರ್ ನಿನಗೆ ಇನ್ನೂ ವಿಷಯ ತಿಳಿದಿಲ್ಲವಾ? ನಾನು ಅರ್ಜೆಂಟ್ ಹೈದರಾಬಾದ್‌ಗೆ ಹೊರಡಬೇಕಾಗಿರುವುದರಿಂದ ಏರ್‌ಪೋರ್ಟ್‌ಗೆ ಹೋಗಲು ರೆಡಿಯಾಗುತ್ತಿದ್ದೆ. ಇರಲಿ ಅಂತ ಟೀವಿ ಹಾಕಿದೆ. ಶಾಕಿಂಗ್ ನ್ಯೂಸ್. ನೈನಿತಾಲಿನಲ್ಲಿ ನಿಮ್ಮ ಅಣ್ಣ ವಿಕ್ರಂ ರೆಡ್ಡಿಗೆ ರಾತ್ರಿ ಹನ್ನೊಂದು ಗಂಟೆಯಲ್ಲಿ ಹಾರ್ಟ್ ಅಟ್ಯಾಕ್ ಆಗಿ, ಸ್ಪೆಷಲ್ ಹೆಲಿಕಾಪ್ಟರ್‌ನಲ್ಲಿ ದಿಲ್ಲಿಗೆ ಕರೆತರುವಾಗ ಹೆಲಿಕಾಪ್ಟರ್‌ನಲ್ಲಿಯೇ ಉಸಿರು ನಿಂತುಹೋಯಿತಂತೆ. ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಮಧ್ಯಾಹ್ನ ಎರಡು ಗಂಟೆಗೆ ಪೋಸ್ಟ್ ಮಾರ್ಟಂ ಮಾಡ್ತಾರಂತೆ. ಕೆಲವು ಚಾನಲ್‌ನವರು ವಿಕ್ರಮ್ ರೆಡ್ಡಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಹೇಳುತ್ತಿದ್ದರೆ, ಇನ್ನೂ ಕೆಲವು ಚಾನಲ್‌ಗಳು ಇದು ಕೊಲೆ ಇರಬೇಕೆಂದು ಅನುಮಾನ ವ್ಯಕ್ತಪಡಿಸುತ್ತಿವೆ. ಹೈದರಾಬಾದ್